ಏನಿದೆ ಅದು ಸ್ವಲ್ಪ ಕಡಿಮೆ ಆಗುತ್ತದೆ. ೬೦೦ ಮೆಗಾವ್ಯಾಟ್ ಅಂದರೆ ೨೫೦೦ ಮಿಲಿಯನ್ ಯೂನಿಟ್ಸ್. ಅಂದಾಗ ೨೫೦೦ ಮಿಲಿಯನ್ ಯೂನಿಟ್ಸ್ ಕಡಿಮೆ ಆಗುತ್ತದೆ. ಮಿಲಿಯನ್ ಯೂನಿಟ್ಸ್ ಅಂದರೆ ಅದರ ಕ್ವಾಂಟಂ, ಮೆಗಾವ್ಯಾಟ್ ಅಂದರೆ ಅದರ ಸ್ಟೆಂಗ್ತ್.

ಅಧ್ಯಕ್ಷರು.—ಮತ್ತೆ ತಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಂಗಳೂರಿನಲ್ಲಿ ಮತ್ತು ಕೋಲಾರದಲ್ಲಿ ಡೀಸಲ್ ಪವರ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೆ ಕೇಂದ್ರ ಸರ್ಕಾರದ ಪರವಾನಗಿ ಬೇಕು. ಅದು ಬಂದ ತಕ್ಷಣ ಮಾಡುತ್ತೇವೆ.

ಅಧ್ಯಕ್ಷರು.—ಈಗ ಮತ್ತೆ ಯಾರಿಗೂ ಅವಕಾಶ ಕೊಡುವುದಿಲ್ಲ. ಪ್ರಶ್ನೋತ್ತರ ವೇಳೆ ಒಂದು ತಾಸು ಇದೆ. ಈಗಾಗಲೇ ೨೦ ನಿಮಿಷವಾಯಿತು, ಇನ್ನೂ ನಾನು ೫ನೇ ಪ್ರಶ್ನೆ ಯಲ್ಲಿದ್ದೇವೆ. ಪ್ರಶ್ನೋತ್ತರ ವೇಳೆಯನ್ನು ಬೆಳಸಬೇಡಿ, ಬೇರೆಯದಕ್ಕೆ ಅವಕಾಶ ಕೊಡಿ ಎಂದು ಹೇಳುವವರು ನೀವೇ. ಆದರಿಂದ ಈಗ ಮತ್ತೆ ಯಾರಿಗೂ ಆ ಪ್ರಶ್ನೆ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ಯಾರು ಪ್ರಶ್ನೆ ಹಾಕಿರುತ್ತಾರೆ ಅವರಿಗೆ ೨-೩ ಸಾರಿ ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು.

ಶ್ರೀ ಎಸ್. ಎಸ್. ಕಡಪಟ್ಟಿ.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ .....

ಅಧ್ಯಕ್ಷರು.—ಪ್ರಶ್ನೆ ಹಾಕಿದವರನ್ನು ಬಿಟ್ಟು ಬೇರೆಯವರು ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ.—ಇದನ್ನು ಅರ್ಧ ಗಂಟೆ ಚರ್ಚೆಗೆ ಅಲೋ ಮಾಡಿ. ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.— ಇಲ್ಲ. ಈಗಎಲ್ಲವು ಮುಖ್ಯವಾದವೇ ಆಗಿರುತ್ತವೆ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಹಳ್ಳಿಗಳಿಗೆ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ದೀಪ ಒದಗಿಸುವ ಬಗ್ಗೆ

೮೩. (೧೦೩) ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗಾ ಜಿಲ್ಲೆಯ ಹಳ್ಳಿಗಳಲ್ಲಿ ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಎಷ್ಟು ಲಂಬಾಣಿ ತಾಂಡಾಗಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಓಣಿಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಯಿತು. ಮತ್ತು ಎಷ್ಟು ಕುಟುಂಬಗಳಿಗೆ ಭಾಗ್ಯಜ್ಯೋತಿ ಯೋಜನೆಯಲ್ಲಿ ಅನುಕೂಲ ವಾಗಿದೆ?

ಆ) ವಿದ್ಯುಚ್ಛಕ್ತಿ ಸರಬರಾಜು ಆಗದ ಹಳ್ಳಿಗಳು ಮತ್ತು ತಾಂಡಾಗಳೆಷ್ಟು ಮತ್ತು ಅವುಗಳು ಎಂದು ಪೂರ್ತಿಗೊಳ್ಳುವುವು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ವಿದ್ಯುತ್ ಸರಬರಾಜು ಮಾಡಿರುವ ವಿವರಗಳು ಈ ಕೆಳಗೆ ಕಂಡಂತಿವೆ :—

ವಿವರ		೧೯೮೪-೮೫	೧೯೮೫-೮೬	೧೯೮೬-೮೭ (೧-೪-೮೬ರಿಂದ ೩೧-೧೨-೮೬ರ ವರೆಗೆ)
೧.	ಲಂಬಾಣಿ ತಾಂಡಾಗಳು	—	೪	೧೮
೨.	ಹರಿಜನ ಕೇರಿಗಳು	೧೨೫	೧೦೬	೬೨

ಭಾಗ್ಯಜ್ಯೋತಿ ಯೋಜನೆಯ ಪ್ರಗತಿ

	ಪ. ಜಾತಿ	ಪ. ವರ್ಗ	ಇತರರು	ಒಟ್ಟು ಕುಟುಂಬಗಳು
೧೯೮೪-೮೫	೧೫೦೩	೪೪೪	೧೩೫೧	೩೨೯೫
೧೯೮೫-೮೬	೭೬೨	೧೫೦	೬೩೭	೧೫೫೦
೧೯೮೬-೮೭ (೩೧-೦೨-೮೭ರ ವರೆಗೆ)	೫೧೭	೭೯	೨೬೦	೮೫೬

(ಆ) ೬೫ ಹಳ್ಳಿಗಳು, ೫೬೦ ತಾಂಡಾಗಳು ವಿದ್ಯುದ್ದೀಕರಣವಾಗದೆ ಇರುವ ಎಲ್ಲಾ ಗ್ರಾಮಗಳನ್ನು ೧೯೮೭-೮೮ರ ಅಂತ್ಯದೊಳಗೆ ವಿದ್ಯುದ್ದೀಕರಣ ಮಾಡುವ ಗುರಿಯಿದೆ. ಈ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಬೇಕಾದ ೫೬೦ ತಾಂಡಾಗಳ ಪೈಕಿ ೩೭೧ ತಾಂಡಾಗಳಿಗೆ ಯೋಜನೆ ತಯಾರಿಸಿ ಗ್ರಾಮೀಣ ವಿದ್ಯುದ್ದೀಕರಣ ನಿಗಮಕ್ಕೆ ಮಂಜೂರಾತಿಗಾಗಿ ಕಳುಹಿಸಲಾಗಿದೆ. ಮಂಜೂರಾತಿ ದೊರೆತ ನಂತರ ಕೆಲಸ ಕೈಗೆತ್ತಿಕೊಳ್ಳಲಾಗುತ್ತದೆ. ಬಾಕಿ ಉಳಿದ ೧೮೯ ತಾಂಡಾಗಳ ವಿದ್ಯುದ್ದಿ ಕರಣಕ್ಕೆ ಯೋಜನೆಗಳು ತಯಾರಾಗುತ್ತವೆ. ಇವನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮಕ್ಕೆ ಮಂಜೂರಾತಿಗಾಗಿ ಕಳುಹಿಸಲಾಗುತ್ತದೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೆ, ಲಂಬಾಣಿ ತಾಂಡ ಮತ್ತು ಹರಿಜನ ಕೇರಿಗಳ ವಿದ್ಯುದ್ದೀಕರಣದ ಬಗ್ಗೆ ಮಾತನಾಡುವುದಾದರೆ ೧೯೮೫-೮೬ರಲ್ಲಿ ೧೨೫ ಹರಿಜನ ಕೇರಿಗಳು ೧೯೮೬-೮೭ರಲ್ಲಿ ೧೦೬ ಹರಿಜನ ಕೇರಿಗಳು ೧೯೮೭-೮೭ರಲ್ಲಿ ಕೇವಲ ೬೨ ಹರಿಜನ ಕೇರಿಗಳು ವಿದ್ಯುದ್ದೀಕರಣ ಆಗಿದೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ತಾವು ೧೯೮೭-೮೭ರಲ್ಲಿ ಎಷ್ಟು ತಾಂಡಾಗಳಿಗೆ, ಹರಿಜನ ಕೇರಿಗಳಿಗೆ ವಿದ್ಯುದ್ದೀಕರಣ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೀರಿ ? ಆದರೆ ಈ ಭಾಗ್ಯಜ್ಯೋತಿ ಯೋಜನೆಯ ಪ್ರಗತಿ ಕೂಡ ಆಷ್ಟಾಗಿ ಆಗಿಲ್ಲ. ೧೯೮೫-೮೬ರಲ್ಲಿ ಕೇವಲ ೧೫೫೦ ಕುಟುಂಬಗಳಿಗೆ ಸೌಲಭ್ಯ ಸಿಕ್ಕಿದೆ. ೧೯೮೬-೮೭ರಲ್ಲಿ ಕೇವಲ ೮೫೬ ಕುಟುಂಬಗಳಿಗೆ ಸಿಕ್ಕಿದೆ. ಆದ್ದರಿಂದ ಕೇಳುತ್ತಿದ್ದೇನೆ, ಈ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದೀರಿ ? ಚಿಂಚೋಳಿ, ಆಳಂದ ಮುಂತಾದ ಕಡೆ ಗುಲ್ಬರ್ಗ ತಾಲ್ಲೂಕಿನಲ್ಲಿ ತಾಂಡಾಗಳು ಹೆಚ್ಚಾಗಿವೆ. ಇದರ ಬಗ್ಗೆ ಕಾರ್ಯಕ್ರಮ ಮಾಡಿಕೊಂಡು ಸಬ್ಸಿಡಿ ಸೆಕ್ಷನ್ ಯಾವಾರೀತಿ ಮಾಡುತ್ತೀರಿ ಎಂಬುದನ್ನು ದಯವಾಡಿ ತಿಳಿಸಬೇಕೆಂದು ಅಧ್ಯಕ್ಷರೆ ಮೂಲಕ ಕೇಳುತ್ತೇನೆ.

ಶ್ರೀ ಜೆ. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಸಂಖ್ಯೆಯಲ್ಲಿ ನೋಡಿದರೆ ೧೯೮೫ರಲ್ಲಿ ಆದಷ್ಟು ೧೯೮೬ರಲ್ಲಿ ಆಗಿಲ್ಲ, ೧೯೮೬ರಲ್ಲಿ ಆದಷ್ಟು ೧೯೮೭ರಲ್ಲಿ ಆಗಿಲ್ಲ, ಎಂಬ ಮಾತನ್ನು ಹೇಳಿದ್ದಾರೆ. ಕಾರಣ ಏನೆಂದರೆ ಪ್ರತಿ ವರ್ಷ ಒಂದು ಗುರಿಯನ್ನು ನಾವು ನಿಗದಿ ಮಾಡಿ ಹಣದ ಸಹಾಯಕ್ಕೋಸ್ಕರ ನಾವು ಗ್ರಾಮೀಣ ವಿದ್ಯುದ್ದೀಕರಣ ನಿಗಮ ಏನಿದೆ ಕೇಂದ್ರದಲ್ಲಿ ಅದರ ಅನುಮತಿಗಾಗಿ ಕಳುಹಿಸಿಕೊಡುತ್ತೇವೆ. ಅವರು ಟಾರ್ಗೆಟ್ ಪೂರ್ತಿ ಒಪ್ಪಿದರೆ ಅದರ ಪ್ರಕಾರ ಕೆಲಸ ಮಾಡುತ್ತೇವೆ. ೧೯೮೫-೮೬ರಲ್ಲಿ ಒಟ್ಟು ರಾಜ್ಯದಲ್ಲಿ ೫೦ ಸಾವಿರ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಬೇಕೆಂಬ ಟಾರ್ಗೆಟ್ ಇತ್ತು. ಆಗ ಗುಲ್ಬರ್ಗ ಜಿಲ್ಲೆಯಲ್ಲಿ ೩,೨೯೮ ಗ್ರಾಮಗಳು ಬಂದೆವು, ನಂತರ ಇಡೀ ರಾಜ್ಯದ ಟಾರ್ಗೆಟ್ ೨೫ ಸಾವಿರ ಗ್ರಾಮಗಳಾಯಿತು. ಇದರಲ್ಲಿ ಹ್ಯಾಮ್ಲೆಟ್‌ಗಳೂ ಸೇರಿವೆ. ಒಟ್ಟು ಟಾರ್ಗೆಟ್ ಸಂಖ್ಯೆ ಅರ್ಧದಷ್ಟು ಕಡಿಮೆ ಆಗಿದ್ದರಿಂದ ಈ ಸಂಖ್ಯೆಯಲ್ಲೂ ಕಡಿಮೆ ನೀವು ನೋಡುತ್ತೀರಿ. ೧೯೮೫-೮೬ರ ಹೊತ್ತಿಗೆ ಪೆನೆಸ್ಸ್ ವಿಲೇಜಸ್ ಎಂದು ಏನು ಕರೆಯುತ್ತೇವೆ ಅದರಲ್ಲಿ ಒಂದು ಗ್ರಾಮವೂ ವಿದ್ಯುದ್ದೀಕರಣ ಆದರೆ ಉಳಿಯುವುದಿಲ್ಲ. ೧೦೦ ಪರ್ಸೆಂಟ್ ಅಚೀವ್‌ಮೆಂಟ್ ೧೯೮೫-೮೬ರ ಹೊತ್ತಿಗೆ ಆಗುತ್ತದೆ. ೨೪ ಸಾವಿರ ಹ್ಯಾಮ್ಲೆಟ್‌ಗಳ ಪೈಕಿ ೬ ಸಾವಿರ ಆಗಿದೆ. ಇನ್ನೂ ೧೮ ಸಾವಿರ ಉಳಿದಿವೆ. ೧೮ ಸಾವಿರ ಹ್ಯಾಮ್ಲೆಟ್ಸ್‌ಗಳ ಕೆಲಸ ತೆಗೆದುಕೊಳ್ಳುತ್ತಿದ್ದೇವೆ. ಈ ಕೆಲಸವೆಲ್ಲಾ ಮುಗಿದಮೇಲೆ ನಮಗಿರತಕ್ಕ ಎಲ್ಲಾ ವ್ಯವಸ್ಥೆಯನ್ನು ಆ ಕಡೆ ಡೈವರ್ಟ್ ಮಾಡಬೇಕಾಗುತ್ತದೆ. ಈಗಾಗಲೇ ಕೆಲಸ ಮಾಡುತ್ತಿದ್ದೇವೆ. ಪೆನೆಲ್ಲಾ ವಿಲೇಜಸ್ ತೆಗೆದುಕೊಂಡರೆ ಹ್ಯಾಮ್ಲೆಟ್ಸ್ ಕೂಡ ಬರುತ್ತದೆ. ತಾಂಡಾಗಳು ಮತ್ತು ಹರಿಜನ ಕೇರಿಗಳನ್ನು ಪಕ್ಕಾ ಕ್ಯಾಪಿಟಲ್ ಆರ್.ಎ.ಪಿ. ಸ್ಕೀಮಿನಲ್ಲಿ ಕ್ಲಿಯರ್ ಆಗುವಂತೆ ಮಾಡಿದ್ದೇವೆ. ಆದ್ದರಿಂದ ಈ ವ್ಯತ್ಯಾಸ ಕಾಣುತ್ತದೆ.